
# ಮಹಾಯೋಗಿ ಶ್ರೀಅರವಿಂದರು

*ಸಂಗ್ರಹ ಬರಹ* : ವರಾಹ ಮೂರ್ತಿ

*ಶ್ರೀಅರವಿಂದರ ಹಾಗೂ ಸ್ವಾಮಿ ವಿವೇಕಾನಂದರ ವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಿರುವ, ಅವರ ಜೀವನ ಮೌಲ್ಯಗಳನ್ನು ಸ್ವಂತ ಬದುಕಿನಲ್ಲಿ ಅಳವಡಿಸಿಕೊಳ್ಳುವ ಹವ್ಯಾಸವುಳ್ಳ ಶ್ರೀ ವರಾಹ ಮೂರ್ತಿಯವರು ಗೌರಿಬಿದನೂರಿನ ಶ್ರೀ ಅರವಿಂದ ಸೊಸೈಟಿಯ ಜಂಟಿ ಕಾರ್ಯದರ್ಶಿಗಳು ಹಾಗೂ ಅಲ್ಲಿನ ಆಚಾರ್ಯ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಹಿರಿಯಶ್ರೇಣಿ ಉಪನ್ಯಾಸಕರಾಗಿದ್ದಾರೆ.*



ಶ್ರೀಅರವಿಂದರು

**ಭಾ**ರತದ ಒಂದು ವಿಶೇಷ ಭಾಗ್ಯವೆಂದರೆ ಇಲ್ಲಿಯ ಸಂತ, ಋಷಿಮುನಿಗಳ ಉಜ್ವಲ ಪರಂಪರೆ. ಇವರು ಕಾಲಕಾಲಕ್ಕೆ ಇತಿಹಾಸದ ನಿರ್ಣಾಯಕ ಘಟ್ಟಗಳಲ್ಲಿ ಜನ್ಮವೆತ್ತಿ ಬಂದು ದೇಶ, ಧರ್ಮ, ಸಮಾಜಗಳನ್ನು ಮೇಲೆತ್ತಿದ್ದಾರೆ. ನಾಂತೋऽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ—"ಹೇ ಅರ್ಜುನ, ನನ್ನ ದಿವ್ಯ ವಿಭೂತಿಗಳಿಗೆ ಕೊನೆಯೇ ಇಲ್ಲ"—ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ ಹೇಳಿರುವ ಮಾತನ್ನೇ ಶ್ರೀ ಅರವಿಂದರು ***"A hero, a saint and Rishi are the natural fruit of this soil"*** (ಶೂರ, ಮಹಾಂತ, ಋಷಿಮುನಿಗಳು ಈ ದೇಶದ ಸ್ವಾಭಾವಿಕ ಬೆಳೆ) ಎಂದು ಅರ್ಥಪೂರ್ಣವಾಗಿ, ಮಾರ್ಮಿಕವಾಗಿ ನುಡಿದಿದ್ದಾರೆ. ಸಾವಿರಾರು ವರ್ಷಗಳ ನಿರಂತರ ವಿದೇಶೀಯ ಆಕ್ರಮಣಕ್ಕೆ ಬಲಿಯಾದರೂ ಭಾರತದ ಸಂಸ್ಕೃತಿ ಹಾಗೂ ಸನಾತನ ಧರ್ಮಗಳು,ಈಜಿಪ್ಟ್, ಗ್ರೀಕ್, ರೋಮ್ ಸಂಸ್ಕೃತಿಗಳಂತೆ ನಶಿಸಿ ಇತಿಹಾಸದ ಅವಶೇಷಗಳಾಗಿ ಉಳಿಯದೆ, ನಿತ್ಯ ನಿರಂತರ ಚೈತನ್ಯಯುಕ್ತವಾಗಿ, ತಾಳಿ, ಬಾಳಿ ಬೆಳೆದುಬಂದಿರುವುದಕ್ಕೆ, ಕಾಲಕಾಲಕ್ಕೆ ಜನ್ಮವೆತ್ತಿಬಂದ ಸಂತ, ಮಹಾಂತ, ಋಷಿಮುನಿಗಳೇ ಕಾರಣೀಭೂತರೆಂದು ಭಾರತದ ಇತಿಹಾಸ ಸಾರಿ ಹೇಳುತ್ತಿರುವುದಕ್ಕೆ ಮಹಾಯೋಗಿ ಶ್ರೀಅರವಿಂದರೂ ಜೀವಂತ ನಿದರ್ಶನ-ಆದರ್ಶರಾಗಿದ್ದಾರೆ.

ಮಹಾಯೋಗಿ ಶ್ರೀಅರವಿಂದರ ಜನ್ಮದಿನ ಹಾಗೂ ಭಾರತದ ಸ್ವಾತಂತ್ರ್ಯದಿನಗಳ ಅಪೂರ್ವ ಸಂಯೋಗವು ವೈಶಿಷ್ಟ್ಯಪೂರ್ಣವಾಗಿದೆ. ಮಹಾಯೋಗಿಯೊರ್ವರ ಜನ್ಮದಿನವು ನಮ್ಮ ಸ್ವಾತಂತ್ರ್ಯ ದಿನಕ್ಕೆ ವಿಶಾಲವಾದ ಹಾಗೂ ನಿಗೂಢವಾದ ಅರ್ಥವೊಂದನ್ನು ನೀಡಿ ಅದನ್ನು ಅರ್ಥಪೂರ್ಣವಾಗಿಸಿದೆ.

೧೮೭೨ನೆಯ ಆಗಸ್ಟ್ ೧೫ರಂದು ಸೂರ್ಯೋದಯಕ್ಕೆ ಮೊದಲಿನ ಮುಂಬೆಳಗಿನಲ್ಲಿ ಶ್ರೀಅರವಿಂದರು ಕಲ್ಕತ್ತೆಯಲ್ಲಿ ಜನ್ಮ ತಳೆದರು. ಆಗ್ಗೆ ಆಗಸ್ಟ್ ೧೫ ಎಲ್ಲ ದಿನಗಳಂತೆ ಒಂದು ದಿನವಾಗಿತ್ತು. ಅದೇ ರೀತಿಯಲ್ಲಿ ಈ ಶಿಶುವಿನ ಜನನವೂ ಕೂಡ ಸಾಮಾನ್ಯ ಸಂಗತಿಯಾಗಿತ್ತು. ಆದರೆ ಬಾಲಕ ಅರವಿಂದನು ಬೆಳೆಯುತ್ತಾ ಪೂರ್ಣಯೋಗಿಯಾಗಿ ಅತಿಮಾನಸ ಶಿಖರವನ್ನು ತಲುಪಿದ ಮೇಲೆ ಈ ಜನನದ ಮಹತ್ವವು ಜಗತ್ತಿಗೇ ತಿಳಿದಂತಾಯ್ತು. ಈ ಶಿಶುವಿನ ಜನನವಾದ ೭೫ ವರ್ಷಗಳು ಗತಿಸಿದ ನಂತರವೇ, ಇದೇ ಆಗಸ್ಟ್ ೧೫ರಂದು ಭಾರತವು ಪರದಾಸ್ಯದ ಶೃಂಖಲೆಯನ್ನು ಹರಿದೊಗೆದು ಸ್ವತಂತ್ರವಾಯ್ತು. ದಿನಾಂಕಗಳ ಈ ಸಾಮ್ಯವು ಆಕಸ್ಮಿಕವೆಂದು ಕೆಲವರಿಗೆ ತೋರಿದರೂ, ಸ್ವಾತಂತ್ರ್ಯಯೋಧರಲ್ಲಿ ಅಗ್ರಗಣ್ಯನಾಗಿ, ಅಲ್ಪಕಾಲದಲ್ಲಿಯೇ ಸ್ವಾತಂತ್ರ್ಯಹೋರಾಟಕ್ಕೆ ಮಿಂಚಿನ ಸ್ಫೂರ್ತಿಯನ್ನು ತುಂಬಿ, ಬಾಲ್ಯದ ಬಹುಭಾಗವನ್ನು ಪಾಶ್ಚಿಮಾತ್ಯ ಸಂಸ್ಕೃತಿಯ ಮಧ್ಯದಲ್ಲೇ ಕಳೆದರೂ ಸಹ ಭಾರತೀಯ ಸಂಸ್ಕೃತಿಯ ಸಾರವನ್ನೇ ಮೈತುಂಬಿಕೊಂಡು ಧೀರೋದಾತ್ತ ದೇಶಪ್ರೇಮಿಯಾಗಿ ಬೆಳೆದ ಬಾಲಕ ಅರವಿಂದನು ತನ್ನ ಜನನದಿಂದಲೇ ಬರಲಿರುವ ಭಾರತದ ಸ್ವಾತಂತ್ರ್ಯದ ಭವಿಷ್ಯವನ್ನು ಸಾರಿದನೆಂದರೆ ತಪ್ಪಾಗಲಾರದು.

ಶ್ರೀಅರವಿಂದರು ಯೋಧರಾಗಿ, ಸಶಸ್ತ್ರಕ್ರಾಂತಿಯ ಹರಿಕಾರರಾಗಿ, ಯೋಗಿಯಾಗಿ, ಯೋಗೇಶ್ವರರಾಗಿ, ಮಹಾಕವಿಯಾಗಿ,

ಪ್ರಸ್ಕಾರರಾಗಿ ಭಾರತಕ್ಕೆ ಪುನಃ ಆಧ್ಯಾತ್ಮಿಕ ಪ್ರಪಂಚದಲ್ಲಿ ಗುರು ಸ್ಥಾನದ ಗೌರವವನ್ನು ದೊರಕಿಸಿಕೊಟ್ಟಿದ್ದಾರೆ. ಅವರು ಸೃಷ್ಟಿಸಿದ ಸಾಹಿತ್ಯ ಮೇರುಕೃತಿಗೆ ಸದೃಶವಾಗಿದೆ. **ದಿವ್ಯಜೀವನ, ಯೋಗ ಸಮನ್ವಯ, ಮಹಾಕಾವ್ಯ-ಸಾವಿತ್ರಿ, ಪೂರ್ಣಯೋಗದ ಪತ್ರಗಳು, ಮಾನವಚಕ್ರ, ಭಾರತೀಯ ಸಂಸ್ಕೃತಿಯ ಮೂಲಗಳು** ಮುಂತಾದ ಅನೇಕ ಬೃಹತ್ ಗ್ರಂಥರಾಶಿಯ ಮೂಲಕ ತಮ್ಮ ಅನುಭಾವ ಸಂಪತ್ತನ್ನು ಜಗತ್ತಿಗೆ, ಮಾನವಕುಲಕ್ಕೆ ಧಾರೆ ಎರೆದಿದ್ದಾರೆ. ಸೃಷ್ಟಿಯ ವಿಕಾಸಕ್ರಮದ ರಹಸ್ಯವನ್ನೇ ತೆರೆದು ತೋರಿದ್ದಾರೆ. ಅತಿ ಮಾನವನ ಆಗಮನದ ಅನಿವಾರ್ಯತೆಯನ್ನು ಹಾಗೂ ಪೃಥ್ವಿಯ ಮೇಲೆ ದೈವೀ ಜೀವನದ ಸಾಧ್ಯತೆಯ ಸಂದೇಶವನ್ನು ಸಾರಿದ್ದಾರೆ. ಅವರ ಸಂದೇಶವು ಕೇವಲ ಭರವಸೆಯನ್ನು ಮಾತ್ರ ನೀಡದೆ, ಖಚಿತ ಕ್ರಿಯಾಧಾರೆಯನ್ನೇ ಪ್ರವಹಿಸುತ್ತದೆ.

ಶ್ರೀಅರವಿಂದರ ವಾಣಿಯಂತೆ, "ಮಾನವನು ಪರಿವರ್ತನೆಯ ಹಂತದಲ್ಲಿರುವ ಜೀವಿ; ಅವನು ಕೊನೆಯಲ್ಲ.... ಮಾನವನಿಂದ ಅತಿಮಾನವನೆಡೆಗೆ.... ಇದು ಮುಂದಿನ ಹೆಜ್ಜೆಯಾಗಿದೆ. ಅದು ಅನಿವಾರ್ಯ. ಏಕೆಂದರೆ, ಅದು ಅಂತರಾತ್ಮದ ಉದ್ದೇಶ ಹಾಗೂ ತರ್ಕಬದ್ಧವಾದ ಪ್ರಕೃತಿಯ ಗತಿಯೂ ಸಹ." ಭಾರತ ರಾಷ್ಟ್ರ ನಿರ್ಮಾಣದ ಸಂಬಂಧದಲ್ಲಿ "ಧೀರ, ನಿಷ್ಕಪಟ, ಪರಿಶುದ್ಧ, ಉತ್ಸಾಹೀ ಮತ್ತು ಅಭೀಪ್ಸಾಯುಕ್ತ ಯುವಜನಾಂಗದ ತಳಹದಿಯ ಮೇಲೆ ಮಾತ್ರ ಭವಿಷ್ಯರಾಷ್ಟ್ರವು ನಿರ್ಮಾಣವಾಗುವುದು. ಭವಿಷ್ಯತ್ತು ಯುವಜನಾಂಗಕ್ಕೆ ಸೇರಿದೆ. ನಮ್ಮ ಕರೆಯು ಯುವಭಾರತಕ್ಕೆ ಇದೆ" ಎಂದು ಶ್ರೀಅರವಿಂದರು ನುಡಿದಿರುತ್ತಾರೆ. ಅವರ ಮತ್ತೊಂದು ವಾಣಿಯಂತೆ, "ಇತರರು ತಮ್ಮ ದೇಶವನ್ನು ಜಡಪದಾರ್ಥದ ತುಣುಕು-ಹೊಲ, ಕಾಡು, ಗುಡ್ಡ, ನದಿಗಳು—ಎಂದು ತಿಳಿದರೆ ನಾನು ಮಾತ್ರ ನನ್ನ ದೇಶವನ್ನು 'ತಾಯಿ'ಎಂದು ಭಾವಿಸುತ್ತೇನೆ." ಅಲ್ಲದೆ, "ಈಪೃಥ್ವೀಜೀವನವು ದಿವ್ಯಜೀವನವಾಗಲಿದೆ" ಎಂದು ದಿವ್ಯವಾಣಿ ನುಡಿದಿದ್ದಾರೆ.

೧೫.೮.೧೯೪೭ರಂದು ಸ್ವತಂತ್ರ ಭಾರತದ ಜನ್ಮದಿನದಂದು ಒಂದು ಸಂದೇಶ ನೀಡುವಂತೆ ಶ್ರೀಅರವಿಂದರನ್ನು ಕೇಳಿಕೊಳ್ಳಲಾಯಿತು. ಸ್ವಾಭಾವಿಕವಾಗಿಯೇ ತಮ್ಮ ೭೫ನೇ ಜನ್ಮದಿನವೂ ಆಗಿದ್ದ ಆಂದಿನ ಸುದಿನವು ಅವರಿಗೆ ಸಂತಸ ತಂದುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಅವರ ಯೋಗದೃಷ್ಟಿಗನುಸಾರವಾಗಿ ಅದೊಂದು ಆಕಸ್ಮಿಕ, ಕಾಕತಾಳೀಯ ಘಟನೆಯಾಗಿದೆ. ತಮ್ಮ ಜೀವನಾರಂಭದಿಂದಲೂ ತಮ್ಮ ಕಾರ್ಯದಲ್ಲಿ ಮಾರ್ಗದರ್ಶನ ಮಾಡುತ್ತ ಬಂದಿರುವ ದೈವೀ ಶಕ್ತಿಯ ಅಂಗೀಕಾರದ ಮುದ್ರೆ ಅದಾಗಿದೆಯೆಂದು ಅವರು ತಮ್ಮ ಸಂದೇಶದ ಆರಂಭದಲ್ಲಿ ತಿಳಿಸುತ್ತಾರೆ. ಭಾರತ ಹಾಗೂ ಜಗತ್ತಿನ ಭವಿತವ್ಯದ ಬಗ್ಗೆ ತಾವು ಕಂಡ ಕನಸುಗಳು ನನಸಾಗುವ ಮಾರ್ಗ ಹಿಡಿದಿರುವುದನ್ನು ಸ್ಮರಿಸುತ್ತಾರೆ. ಅವರು ತಮ್ಮ ಸಂದೇಶದಲ್ಲಿ ಸ್ಮರಿಸಿಕೊಂಡ ಐದು ಕನಸುಗಳ ಬಗ್ಗೆ ಸಂಕ್ಷಿಪ್ತ ಸ್ಮರಣೆ ಮಾಡುವುದು ಇಂದು ಅತ್ಯಂತ ಸಮಯೋಚಿತವಾಗಿದೆ.

**೧. ಮೊದಲನೆಯ ಕನಸು : ಸರ್ವತಂತ್ರ, ಸ್ವತಂತ್ರ, ಏಕೀಕೃತ ಅಖಂಡ ಭಾರತ.** ಭಾರತವೇನೋ ಸ್ವತಂತ್ರವಾಗಿದೆ. ಆದರೆ ಐಕ್ಯತೆಯನ್ನು ಸಾಧಿಸಲಾಗಿಲ್ಲ, ಹರಕು ಮುರುಕು ಸ್ವಾತಂತ್ರ್ಯ ಇದಾಗಿದೆ.... ಐಕ್ಯತೆಯು ಯಾವುದೇ ರೂಪದಲ್ಲಿ ಬರಲೇಬೇಕು. ವಿಭಜನೆ ಅಳಿಯಲೇಬೇಕು, ಅಳಿದೇ ತೀರುವುದು. ಅದಾಗದೆ ಭಾರತವೆಂದೂ ಬಲಿಷ್ಠವಾಗದು, ಭದ್ರವಾಗದು .... ಈ ವಿಭಜನೆಯನ್ನು ಶಿಲಾಶಾಸನವೆಂದು ಪರಿಗಣಿಸದೇ, ತಾತ್ಪೂರ್ತಿಕ ಕಾರ್ಯನಿರ್ವಹಣೆಯ ಒಂದು ಉಪಾಯ ಮಾತ್ರವೆಂದು ಭಾವಿಸಬೇಕು.... ವಿಭಜನೆಯು ಸ್ಥಾಯೀ ಸ್ವರೂಪದ್ದೆಂದು ತಿಳಿದರೆ ಭಾರತವು ಭಯಾನಕವಾಗಿ, ದುರ್ಬಲವಾಗಿ, ಕುಂಠಿತವಾಗಿ, ಪರಕೀಯ ದಾಳಿಗಳಿಗೆ ತುತ್ತಾಗುವ ಭಯವೂ ಉಳಿಯುವುದು.

**೨. ಎರಡನೆಯ ಕನಸು : ಏಷಿಯಾ ಖಂಡದ ಪುನರುತ್ಥಾನ.** ಹಿಂದಕ್ಕೆ, ಮಾನವ ಜನಾಂಗದ ಉನ್ನತಿ, ಏಳ್ಗೆಯ ಕಾರ್ಯದಲ್ಲಿ ಏಷಿಯಾ ಖಂಡಕ್ಕೆ ಯಾವ ಮಹಾನ್ ಪಾತ್ರ ಮತ್ತು ಸ್ಥಾನವಿತ್ತೋ ಅದು ಮರಳಿ ದೊರೆಯಬೇಕಾಗಿದೆ... ಪರತಂತ್ರವಿರುವ ಭಾಗಗಳು ಸ್ವತಂತ್ರಗೊಳ್ಳುವುವು... ಇದರಲ್ಲಿ ಭಾರತದ ಪಾತ್ರವು ಅತ್ಯಂತ ಸಾಮರ್ಥ್ಯ, ಯೋಗ್ಯತೆಗಳಿಂದ ಪ್ರಾರಂಭಿಸಲ್ಪಡಬೇಕಾಗಿದೆ.

**೩. ಮೂರನೆಯ ಕನಸು: ವಿಶ್ವ ಸಂಘ.** ಸಮಸ್ತ ಮಾನವ ಜನಾಂಗಕ್ಕಾಗಿ ಒಂದು ಸುಂದರತಮ ಜೀವನಕ್ರಮಕ್ಕಾಗಿ. ಬಾಹ್ಯ ಆಧಾರ ನಿರ್ಮಿಸಲು ವಿಶ್ವಸಂಘದ ನಿರ್ಮಾಣ ಆವಶ್ಯಕ.... ಏಕತ್ವದ ಒಂದು ಹೊಸ ಭಾವವು ಮಾನವ ಜನಾಂಗದ ಮೇಲೆ ಅಧಿಪತ್ಯ ನಡೆಸುವಂತಾಗಬೇಕು....

**೪. ನಾಲ್ಕನೆಯ ಕನಸು : ಜಗತ್ತಿಗೆ ಭಾರತದ ಆಧ್ಯಾತ್ಮಿಕ ಜ್ಞಾನದಾನ.** ಜಗತ್ತಿಗೆ ಭಾರತದ ಆಧ್ಯಾತ್ಮಿಕ ಜ್ಞಾನದಾನದ ಕ್ರಿಯೆ ಮೊದಲಿನಿಂದಲೇ ಪ್ರಾರಂಭವಾಗಿದೆ... ಯೂರೋಪ್, ಅಮೆರಿಕಗಳಲ್ಲಿ ನಿತ್ಯ ನಿರಂತರ ಬೆಳೆಯುವ ಮಟ್ಟದಲ್ಲಿ ಅದು ಈಗಾಗಲೇ ಪ್ರವೇಶ ಮಾಡಿದೆ. ವರ್ತಮಾನಕಾಲದ ವಿಪತ್ತುಗಳ ಮಧ್ಯದಲ್ಲೂ ಹೆಚ್ಚು ಜನರ ಆಶಾಪೂರಿತ ನೇತ್ರಗಳು ಭಾರತದತ್ತ ಹೊರಳುತ್ತಿವೆ... ಹೆಚ್ಚು ಜನರು ಭಾರತದ ಅಂತರಾತ್ಮಿಕ, ಆಧ್ಯಾತ್ಮಿಕ ಸಾಧನೆಯ ಆಶ್ರಯವನ್ನು ಉತ್ತರೋತ್ತರವಾಗಿ ಪಡೆಯುತ್ತಿದ್ದಾರೆ....

**೫. ಐದನೆಯ ಕನಸು: ಕ್ರಮವಿಕಾಸದ ಮುಂದಿನ ಹೆಜ್ಜೆ.** ಇದು ನನ್ನ ಅಂತಿಮ ಸ್ವಪ್ನ.... ಕ್ರಮವಿಕಾಸದ ಮುಂದಿನ ಹೆಜ್ಜೆಯು ಮನುಷ್ಯನನ್ನು ಒಂದು ಉಚ್ಚತರ ಮತ್ತು ವಿಶಾಲತರ ಚೈತನ್ಯದತ್ತ ಎತ್ತಿಕೊಂಡು ಹೋಗುವುದು... ಇಲ್ಲಿಯವರೆಗೆ ಇದು ವ್ಯಕ್ತಿಗತ ಆಸೆ ಮತ್ತು ವಿಚಾರ ಹಾಗೂ ಆದರ್ಶಮಾತ್ರವಾಗಿ ಉಳಿದಿತ್ತು. ಈಗ ಇದು ಭಾರತ ಹಾಗೂ ಪಶ್ಚಿಮದ ಎರಡೂ ಪ್ರದೇಶಗಳಲ್ಲಿಯ ದೂರದರ್ಶಿ ವಿಚಾರವಂತರನ್ನು

ಅಧೀನಗೊಳಿಸಿಕೊಳ್ಳತೊಡಗಿದೆ.... ಈ ವಿಕಾಸವು ಸಂಭವಿಸ ಬೇಕಾದರೆ ಆತ್ಮ ಮತ್ತು ಅಂತರ ಚೇತನದ ಅಭಿವೃದ್ಧಿ ಮೂಲಕ ಸಾಧ್ಯವಾಗುತ್ತದೆ..... ಇದರ ಪ್ರಾರಂಭವನ್ನು ಭಾರತವೇ ಮಾಡ ಬಲ್ಲದು....

ಇವೆಲ್ಲ ಶ್ರೀಅರವಿಂದರ ಕನಸುಗಳು, ಓರ್ವ ದ್ರಷ್ಟಾರನ ಕಾಣ್ಕೆಗಳು. ಈ ಮಂತ್ರದ್ರಷ್ಟಾರ ಯೋಗಿಯ ವಾಣಿಗೆ ಓಗೊಟ್ಟಿದ್ದರೆ ಭಾರತವು ಅದೆಷ್ಟೋ ಕಷ್ಟಪರಂಪರೆಗಳಿಂದ ಮುಕ್ತವಾಗಿ ಬಲಿಷ್ಠ, ಭದ್ರ, ಅಖಂಡ ಭಾರತವಾಗಿ ಜಗತ್ತಿನಲ್ಲಿ ಮೆರೆಯುತ್ತಿತ್ತು. ಋಷಿವಾಣಿಗೆ ಕಿವಿಗೊಡದಿದ್ದರಿಂದಲೇ ಭಾರತವಿಂದು ದೌರ್ಬಲ್ಯ, ಅನೈಕ್ಯತೆಗಳ ಬಲೆಯಲ್ಲಿ ಸಿಲುಕಿ ನರಳುತ್ತಿದೆ. ಚುಕ್ಕಾಣಿಯಿಲ್ಲದ ಹಡಗಿನಂತೆ ಆಗಿ ಭಯೋತ್ಪಾದನೆ, ಪರಕೀಯ ಆಕ್ರಮಣದ ಭೀತಿ, ಸ್ವಾರ್ಥ, ವಂಚನೆ, ದೇಶದ್ರೋಹಿಗಳ ಸುಳಿಯಲ್ಲಿ ಸಿಕ್ಕು ತತ್ತರಿಸುತ್ತಿದೆ.

ಶ್ರೀಅರವಿಂದರ ಕನಸುಗಳು ನಮ್ಮೆಲ್ಲರ ಕನಸುಗಳಾಗಲಿ! ಅವುಗಳನ್ನು ನನಸಾಗಿಸುವ ದಿಶೆಯಲ್ಲಿ ನಾವೆಲ್ಲರೂ ನಿಷ್ಠೆ-ಶ್ರದ್ಧೆಗಳಿಂದ ಕಾರ್ಯತತ್ಪರರಾಗೋಣ. ಆಗ ಮಾತ್ರ ಅವರ ಅನುಗ್ರಹ, ಮಾರ್ಗದರ್ಶನ ನಮಗೆ ಸದಾ ಬೆಂಬಲವಾಗಿ ಬರುವುದರಲ್ಲಿ ಸಂದೇಹವಿಲ್ಲ. ಪೃಥ್ವಿಯ ಮೇಲೆ ದೈವೀಜೀವನದ ಸಾಧ್ಯತೆಗಾಗಿಯೇ ಶ್ರೀಅರವಿಂದರು ಜೀವನವಿಡೀ ಕಠಿಣ ತಪಗೈದಿದ್ದಾರೆ. ದಿವ್ಯಶಕ್ತಿಯನ್ನೇ ಊರ್ಧ್ವಲೋಕಸ್ತರಗಳಿಂದ ಧರೆಗಿಳಿಸಿ ತರಲು ಭಗೀರಥನಂತೆ ಬಿಡದೆ ಸಾಹಸಗೈದಿದ್ದಾರೆ. ಅವರ ದಿವ್ಯ ಸಂದೇಶಕ್ಕೆ ಓಗೊಡುವುದರಲ್ಲಿ ವ್ಯಕ್ತಿಗತ ಕಲ್ಯಾಣ ಮಾತ್ರವಲ್ಲ, ಇಡೀ ದೇಶದ ಹಾಗೂ ಸಮಸ್ತ ಪೃಥ್ವಿಯ ಕಲ್ಯಾಣ ಅಡಗಿದೆ.

ಇದಕ್ಕಾಗಿಯೇ ಪಾಂಡಿಚೆರಿಯ ಶ್ರೀಅರವಿಂದಾಶ್ರಮ ಶ್ರೀಅರವಿಂದರ ಪೂರ್ಣಯೋಗದ ಪ್ರಯೋಗಶಾಲೆಯಾಗಿದೆ. ಜಗತ್ತಿನ ವಿವಿಧ ಭಾಗಗಳಿಂದ ಅಂತರಾತ್ಮನ ಕರೆಗೆ ಓಗೊಟ್ಟು ಆಗಮಿಸಿದ ಅಧಿಕ ಜನರು ಒಂದೆಡೆ ಸೇರಿ, ಸಂಕುಚಿತ ಮತ, ಪಂಥ, ದೇಶ, ಭಾಷೆಗಳ ಎಲ್ಲೆಯನ್ನು ಮೀರಿ, ಕಾಯಕತತ್ಪರರಾಗಿ ಜೀವನವನ್ನೇ ಯೋಗವನ್ನಾಗಿ ಮಾರ್ಪಡಿಸಿಕೊಳ್ಳುವ ಪ್ರಯೋಗದಲ್ಲಿ ನಿರತರಾಗಿದ್ದಾರೆ. ಪ್ರಪಂಚಕ್ಕೆ ಹೆದರಿ ಓಡಿಬಂದ ಆಲಸಿಗರ ಅಥವಾ ವಿರಕ್ತ ಸಂನ್ಯಾಸಿಗಳ ತಾಣವಿದಲ್ಲ. ಧೀರ, ವೀರ ಕರ್ಮಯೋಗಿಗಳ ಯೋಗಭೂಮಿ ಶ್ರೀಅರವಿಂದಾಶ್ರಮ. ಇದು ನೂತನ ಜನಾಂಗದ ಒಂದು ಪ್ರಯೋಗಶಾಲೆ. ಇಲ್ಲಿಯ ಶಿಕ್ಷಣ, ಜೀವನಕ್ರಮ ಎಲ್ಲವೂ ಸಮಗ್ರ ಹಾಗೂ ಪರಿಪೂರ್ಣ, ಜೀವನವೆಲ್ಲ ಯೋಗ!

"ಆರೋವಿಲ್"—ಇದೊಂದು ಭವಿಷ್ಯ ನಗರ. ಬರಲಿರುವ ಹೊಸಮಾನವತೆಯ ತೊಟ್ಟಿಲು. ಶ್ರೀಅರವಿಂದರ ದಿವ್ಯ ಚಿಂತನೆಗೆ ಶ್ರೀಮಾತೆಯವರು ಕೊಟ್ಟಿರುವ ಒಂದು ಸಾಕಾರ ಸ್ವರೂಪ. ಈ ನಗರ ಇಡೀ ವಿಶ್ವಕ್ಕೆ ಸೇರಿದುದು. ಇದು ಮಾನವ ಐಕ್ಯತೆಯ ಪ್ರತೀಕ. ಸಾಮಾನ್ಯ ಮಾನವಪ್ರಜ್ಞೆಯನ್ನು ಮೀರಿ ಉನ್ನತ ಪ್ರಜ್ಞೆಯಲ್ಲಿ ವಾಸಿಸಬಯಸುವವರ ಭೂಸ್ವರ್ಗ ಆರೋವಿಲ್! ರಾಜಕೀಯ, ಪೋಲೀಸು, ಪಕ್ಷ, ಪಂಗಡ, ಮತ, ಪಂಥಗಳಿಗೆ ಇಲ್ಲಿ ಸ್ಥಳವಿಲ್ಲ. ಇದೊಂದು ದಿವ್ಯ, ಸುಂದರ, ಸಾಮರಸ್ಯ ಪೂರ್ಣ ಪುಟ್ಟ ಪ್ರಪಂಚವೇ ಸರಿ. ◆

## ಪೂರ್ಣತೆಯ ಪ್ರತಿರೂಪ ಶ್ರೀರಾಮಕೃಷ್ಣರು

ರಾಮಕೃಷ್ಣ ಪರಮಹಂಸರಂತಹ ಇನ್ನೊಂದು ಅವತಾರವನ್ನು ಜಗತ್ತು ಇನ್ನು ಐನೂರು ವರ್ಷಗಳವರೆಗೆ ಸಹಿಸಲಾರದು. ಅವರು ಬಿಟ್ಟುಹೋಗಿರುವ ಚಿಂತನರಾಶಿ ಮೊದಲು ಅನುಭವವಾಗಿ ಪರಿವರ್ತನಗೊಳ್ಳಬೇಕು; ಅವರಿಂದ ಹೊರಹೊಮ್ಮಿದ ಆಧ್ಯಾತ್ಮಿಕ ಶಕ್ತಿ ಸಾಧನೆಯಾಗಿ ರೂಪುಗೊಳ್ಳಬೇಕು. ಇದಾಗುವವರೆಗೆ ಹೆಚ್ಚಿನದನ್ನು ಕೇಳುವುದಕ್ಕೆ ನಮಗಾವ ಹಕ್ಕಿದೆ? ಹೆಚ್ಚಿನದನ್ನು ಪಡೆದಾದರೂ ನಾವು ಏನು ಮಾಡಬಲ್ಲೆವು?

ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಧಾರ್ಮಿಕ ಮುಂದಾಳುಗಳ ಸಮುಚ್ಚಯಮೂರ್ತಿಯಾಗಿದ್ದರು. ಅವರು ಹುಟ್ಟುಹಾಕಿರುವ ಚಳುವಳಿಯು ಹಿಂದಿನ ಸ್ಥಳೀಯವಾದ ಮತ್ತು ಸೀಮಿತವಾದ ಚಳುವಳಿಗಳೆಲ್ಲವನ್ನೂ ಏಕೀಕರಿಸುತ್ತದೆ.

ರಾಮಕೃಷ್ಣ ಪರಮಹಂಸರು ಪೂರ್ಣತೆಯ ಪ್ರತಿರೂಪ. ಅವರದು ಮಹಿಮಾನ್ವಿತವಾದ ಪ್ರಜ್ಞಾತೀತ ಜೀವನ ಮತ್ತು ಇದೊಂದೇ ನಮ್ಮನ್ನು ಸಾಗರದೆಡೆಗೆ ಕೊಂಡೊಯ್ಯುವ ಪ್ರವಾಹಗಳ ಏಕೈಕ ಸಾಕ್ಷಿಯಾಗಿರುವುದು. ನಮ್ಮ ಹಿಂದಿರುವ ದಿವ್ಯಶಕ್ತಿಯ ಮತ್ತು ನಮ್ಮ ಮುಂದಿನ ಭವಿಷ್ಯದ ಪ್ರಮಾಣವೂ ಅವರಾಗಿದ್ದಾರೆ. ಅಂತಹ ಶ್ರೇಷ್ಠ ಜನನ ಶ್ರೇಷ್ಠ ಘಟನೆಗಳಿಗೆ ನಾಂದಿಯಾಗುತ್ತದೆ.

ಸಂದೇಹವಾದವು ಶಿಖರಕ್ಕೇರಿದಾಗ, ಆಧ್ಯಾತ್ಮಿಕತೆಯು ತನ್ನನ್ನು ಪ್ರತಿಪಾದಿಸಿಕೊಳ್ಳುವ ಸಮಯ ಬರುತ್ತದೆ. ಅದು ಜಗತ್ತು ಚೈತನ್ಯದ ಅಭಿವ್ಯಕ್ತಿಯೆಂಬುದನ್ನು ಪ್ರತಿಷ್ಠಾಪಿಸಬೇಕಾಗುತ್ತದೆ, ಇಂದ್ರಿಯಗಳು ಸೃಷ್ಟಿಸಿದ ಗೊಂದಲದ ರಹಸ್ಯವನ್ನು ಭೇದಿಸಬೇಕಾಗುತ್ತದೆ, ಮತ್ತು ಮಾನವನ ಅಸಾಧ್ಯ ಸಾಧ್ಯತೆಯನ್ನೂ ಭಗವಂತನ ಅಚ್ಚಳಿಯದ ದಿವ್ಯಾನಂದವನ್ನೂ ಎತ್ತಿ ತೋರಿಸಬೇಕಾಗುತ್ತದೆ. ಈ ಕಾರ್ಯದ ಪೂರ್ಣತೆಯನ್ನು ಸಾಧಿಸುವುದಕ್ಕಾಗಿಯೇ ಶ್ರೀರಾಮಕೃಷ್ಣರು ಬಂದರು. ಬುದ್ಧನ ನಂತರ ಎರಡು ಸಾವಿರ ವರ್ಷಗಳಿಗೂ ಅಧಿಕಕಾಲ ನಡೆದ ಎಲ್ಲ ಬೆಳವಣಿಗೆಯೂ ದಕ್ಷಿಣೇಶ್ವರದ ಈ ಅವತಾರ ಪುರುಷರು ಮಾಡಿದ ಆಧ್ಯಾತ್ಮಿಕ ಬೋಧನೆ ಮತ್ತು ಅನುಭವಗಳ ಸಮನ್ವಯಕ್ಕೆ ಸಿದ್ಧತೆಯಾಗಿದೆ.

—ಶ್ರೀಅರವಿಂದರು.